ಹೊಳೆ ಏನು ಇತ್ತು ಆ ನೀರು ದಕ್ಷಿಣ ಭಾಗಕ್ಕೆ ಹರಿದು ಹೋಗುತ್ತದೆ. ಈಗ ಕೃಷ್ಣಾ ನದಿಯಲ್ಲೂ ಕೂಡ ನೀರು ಒಣಗಿ ಹೋಗಿದೆ ಮತ್ತು ಸುಣಕಲ್ ಹೊಳೆಯಲ್ಲೂ ಕೂಡ ನೀರು ಒಣಗಿ ಹೋಗಿರುವುದರಿಂದ ಈ ಅಭಾವ ಪರಿಸ್ಥಿತಿ ಉಂಟಾಗಿದೆ.

೧—೩೦ ಪಿ. ಎಂ.

ಶ್ರೀ ಎ. ಶರಣಪ್ಪ.—ಸುಣಕಲ್ ಹೊಳೆಯಲ್ಲಿ ಮಳೆಗಾಲದಲ್ಲಿ ಮಾತ್ರ ನೀರಿದ್ದು ಬೇಸಿಗೆಯಲ್ಲಿ ಬತ್ತುತ್ತದೆ. ಕೃಷ್ಣಾ ನದಿಯಲ್ಲಿ ಕ್ರಮೇಣವಾಗಿ ನೀರು ಬರುತ್ತದೆ. ಈ ಡ್ಯಾಂ ಕಟ್ಟುವುದರಿಂದ ನೀರು ಬರುವುದು ನಿಂತು ಹೋಗಿ ಇತ್ತಕಡೆ ದಂಡೆಗೆ ನೀರು ಸಿಕ್ಕದ ಹಾಗೆ ಆಗಿದೆ. ತಜ್ಞರನ್ನು ಕೇಳಿ, ಪುನಃ ಪರಿಶೀಲಿಸಿ ಪರಿಹಾರ ಏನು ತೆಗೆದುಕೊಳ್ಳಬೇಕೆಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಜಿನಿಯರುಗಳ ಸಂಗಡ ಆಲೋಚನೆ ಮಾಡಿಯೇ ನಾನು ಉತ್ತರ ಕೊಡುತ್ತಿರುವುದು. ಈಗ ಕೃಷ್ಣಾ ನದಿಗೆ ನಾರಾಯಣ ಪುರದ ಬಳಿ ಡ್ಯಾಂ ಪೂರ್ಣವಾಗಿ ಕಟ್ಟಿದಮೇಲೆ ಈ ಹಳ್ಳಿಗಳಿಗೆ ನೀರು ಒದಗಿಸ ತಕ್ಕದ್ದು ಸುಲಭವಾಗುತ್ತದೆ. ಆ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ.

MISBEHAVIOUR OF DOCTORS IN BIJAPUR CIVIL HOSPITAL

474. Sri J. L. KABADE (Ballolli).—Will the Minister for Health be pleased to state :—

(*a*) the names of the Doctors working in Civil Hospital, Bijapur for the last four to five years; the date and year in which they have joined the service;

(*b*) of them, the Doctors who behaved roughly and rudely with the patients and also assaulted them;

(*c*) the number of Doctors against whom the Civil Surgeon, Bijapur has reported to the Government for taking disciplinary action and when;

(*d*) whether it is a fact that citizens of Bijapur went in a procession to the hospital to protest against the assault and rude behaviour of Doctors with patients and puerperal women with intention to gherao;

(*e*) whether it has come to the notice of the Government that the Minister for Municipal Administration went to the house of the Doctor for tea party on 26th August 1972 who had been transferred in the interest of administration;

(*f*) whether it has come to the notice of the Government that the Doctor on transfer met the Minister for Municipal Administration when he came to Bijapur and openly requested him for getting the transfer order cancelled;

(*g*) the action taken by the Government on the telegraphic requests made by the Institution and Legislators of Bijapur to the Chief Minister and Minister for Health to the effect that the said Doctor should not be ratained at Bijapur after hearing the news of cancellation of transfer order?

Sri H. SIDDAVEERAPPA (Minister for Health).—

(*a*) 1.	Dr. (Smt.) Girija V. Rokhade	1-9-1967
2.	Dr. Y. Vasudeviah	30-12-1968
3.	Dr. M. M. Anantha Reddy	20-8-1969
4.	Dr. Jamadagni	1-2-1971
5.	Dr. (Smt.) S. V. Koimattur	31-7-1972
6.	Dr. S. K. Ghasate	21-10-1972

(*b*) The Government has not received any report of such behaviour by any one of them.

(*c*) No report has been received by the Government from the Civil Surgeon, Bijapur for taking disciplinary action against any of the Doctors.

(*d*) Yes.

(*e*) No.

(*f*) No.

(*g*) Dr. (Smt.) G. V. Rokhade has been continued in Bijapur hospital as the allegation made againsts her are found to be baseless.

ಶ್ರೀ ಜೆ. ಎಲ್. ಕಬಾಡಿ.—ಡಾಕ್ಟರ್ ರೋಖಾಡೆ ಅವರು ರೋಗಿಗಳನ್ನು ಹೊಡೆದ ಬಗ್ಗೆ, ದುರ್ವರ್ತನೆಯಿಂದ ನಡೆದುಕೊಂಡ ಬಗ್ಗೆ ಸಿವಿಲ್ ಸರ್ಜನ ಅವರು ರಿಪೋರ್ಟ ಮಾಡಿದ ನಂತರ ಡೈರೆಕ್ಟರ ಆಫ್ ಹೆಲ್ತ ಸರ್ವಿಸಸ್ ಅವರು ಜಾಯಿಂಟ ಡೈರೆಕ್ಟರನ್ನು ಚೌಕಸಿ ಮಾಡಲು ಬಿಜಾಪುರಕ್ಕೆ ಕಳುಹಿಸಿರಲಿಲ್ಲವೇ? ಹಾಗೆ ಅವರನ್ನು ಕಳುಹಿಸಿದ್ದಕ್ಕೆ ಟಿ. ಎ. ಮತ್ತು ಡಿ. ಎ. ಎಷ್ಟು ಖರ್ಚಾಯಿತು ಎನ್ನುವುದನ್ನು ವಯವಿಟ್ಟು ತಿಳಿಸುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ನನ್ನ ಹತ್ತಿರ ಯಾವ ಮಾಹಿತಿಯೂ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ತಿಸ್ತಿನ ಕ್ರಮ ಕೈಕೊಳ್ಳಲು ವಿಜಾಪುರ ಸಿವಿಲ್ ಸರ್ಜನರಿಂದ ಸರ್ಕಾರಕ್ಕೆ ವರದಿ ಬಂದಿಲ್ಲವೆಂದು ಹೇಳಿದ್ದಾರಿ. ಆದರೆ ಅವರು ರೋಗಿಗಳ ಬಗ್ಗೆ ನಡೆದುಕೊಂಡ ವರ್ತನೆ ಬಗ್ಗೆ ಏನಾದರೂ ವರದಿಗಳು ಬಂದಿವೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿವೆ.

ಶ್ರೀ ಜೆ. ಎಲ್. ಕಬಾಡಿ.—ಹಾಗಾದರೆ ಏನು ವರದಿಗಳು ಬಂದಿವೆ ಎನ್ನುವು ದನ್ನು ಈ ಸದನದ ಮುಂದೆ ಇಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಆಸ್ಪತ್ರೆಗೆ ಹೋದಂಥ ರೋಗಿಗಳನ್ನು ರೂಡ್ ಆಗಿ ಟ್ರೀಟ್ ಮಾಡುತ್ತಾರೆ ಮತ್ತು ಅಬ್ಯೂಸಿವ್ ಲ್ಯಾಂಗ್ವೇಜ ಉಪಯೋಗಿ ಸುತ್ತಾರೆ ಎನ್ನುವ ವರದಿ ಬಂದಿದೆ.

ಶ್ರೀ ಜೆ. ಎಲ್. ಕಬಾಡಿ.—ಈ ತರಪ ದುರ್ವರ್ತನೆಯಿಂದ ನಡೆದುಕೊಂಡ ಡಾಕ್ಟರ ಮೇಲೆ ಜನರು ರೊಚ್ಚಿಗೆದ್ದು ಬಿಜಾಪುರ ಷಹರಿನಲ್ಲಿ ಪ್ರತಿಭಟನೆ ನಡೆಸಿ ದವಾಖಾನೆವರೆಗೆ ಮೆರವಣಿಗೆ ಕೂಡ ಹೋಗಿ ಅಲ್ಲಿ ಘೇರಾವೋ ಮಾಡಿದರು. ಆಗ ಸಿವಿಲ್ ಸರ್ಜನ್ ಅವರು ಸರ್ಕಾರಕ್ಕೆ ತುರ್ತಾಗಿ ಒಂದು ರಿಪೋರ್ಟನ್ನು ಕಳುಹಿಸಿ ಅವರಿಗೆ ಬೇರೆ ಕಡೆ ವರ್ಗ ಮಾಡುವ ಬಗ್ಗೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಹಾಗೆ ತಿಳಿಸುವುದಾಗಿ ಭರವಸೆ ಕೊಟ್ಟನಂತರ ಹತ್ತಾರು ಜನರು ಹಿಂದಿರುಗಲಿಲ್ಲವೇ? ಅವರ ಬಗ್ಗೆ ಏನು ಕ್ರಮ ಕೈಕೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಆಕೆ ಸ್ಥಳದಲ್ಲಿ ಒಬ್ಬ ಲೋಕಲ್ ಪಾಲಿಟೀಷಿ ಯನ್ ಮಗಳು. ಆದುದರಿಂದ ಇದರಲ್ಲಿ ಇನ್ನೂ ಏನೇನೋ ಸೇರಿಕೊಂಡಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಆಕೆ ಅಲ್ಲಿರುವುದು ಬಳ್ಳೆಯದಲ್ಲ, ಆ ಸ್ಥಳದಿಂದ ವರ್ಗಾವಣೆ ಮಾಡಬೇಕು ಎಂದು ಯೋಚನೆ ಮಾಡಿ ಆರ್ಡರ ಇಷ್ಯೂ ಮಾಡಿದ್ದೇವೆ. ಆಕೆ ಇನ್ನೂ ರಿಲೀವ್ ಆಗದೆ ಇದ್ದರೆ ತಕ್ಷಣ ರಿಲೀವ್ ಮಾಡಬೇಕೆಂದು ಟೆಲಿಗ್ರಾಫಿಕ್ ಆರ್ಡರ ಕೊಡುತ್ತೇವೆ. ಇನ್ನು ಮುಂದೆ ದೂರುಗಳಿಗೆ ಅವಕಾಶವಿರುವುದಿಲ್ಲವೆಂದು ನಾನು ತಿಳಿಸಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ಸಾರ್ವಜನಿಕ ಹಿತದೃಷ್ಟಿಯಿಂದ ಸರ್ವಿಸನಲ್ಲಿ ಇದ್ದವರಿಗೆ, ರಾಜಕೀಯದಲ್ಲಿರುವವರ ಮಕ್ಕಳಾಗಿರಲಿ ಅಥವಾ ಅವರ ಸಂಬಂಧೀಕ ರಾಗಿರಲಿ ಸರ್ಕಾರ ಇಲ್ಲಿಯವರೆ ಸರ್ವಿಸ್ ಕಂಡಿಷನ್ ರೂಲ್ಸ ಪ್ರಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಇಲ್ಲಿಯವರಿಗೂ ಕೈಕೊಂಡಿಲ್ಲ. ಆದಕ್ಕೋಸ್ಕರ ಇನ್ನು ಮೇಲಾದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಏರ್ಪಾಡು ಮಾಡುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ.—ವರ್ಗ ಮಾಡಿದ್ದೇ ಕ್ರಮ ಕೈಕೊಳ್ಳುವುದು.